ಆಕ್ಕೇತಿ. ಒಳಗಿನ ಎಲುಬು ಸೈತ ಎಲ್ಲಾ ಟೊಳ್ಳು ಆಗ್ಯಾವ. ಈಗ ಮಲ್ಲೂರು ಏನಂದ್ರ ಸವೆದು ಹೋಗಿರೋ ಒಂದು ಎಲುಬಿನ ಗೂಡು!. ಇನ್ನೂ ಸ್ವಲ್ಪ ದಿನಾ ನೀವು ಇವರಿಗೆ ಅಧಿಕಾರ ಕೊಟ್ರಿಯಂದ್ರ ಈ ಹಳ್ಳಿಯ ಜೀಂವ ನಮಗ ಗೊತ್ತಯಿಲ್ಲದಂಗನ ಹೊರಟು ಹೋಗಿರತೇತಿ. ನೀವು ಕೂಡಿದ ಜನಾ ಶಾಣ್ಯಾರ ಅದೀರಿ. ಅರಿವು ಇದ್ದವರು ಅದೀರಿ. ಬುದ್ಧಿವಂತರಿದ್ದೀರಿ. ಉಪ್ಪು ತಿಂದವರಿಗೆ ನೀರು ಕುಡಿಸಲಿಕ್ಕೆ ಬೇಕು. ನನಗ ಇನ್ನೂ ಒಂದು ಅವಕಾಶ ಕೊಟ್ಟು ನೋಡ್ರಿ. ಈ ಹೆಣ್ಣುಮಗಳಿಗೆ ಏನು ಮಾಡಲಿಕ್ಕೆ ಸಾಧ್ಯ ಐತಿ ಅಂತ ನಿಮಗ ಅನಿಸಬಹುದು. ಅದೂ ಬ್ಯಾರೆ ಊರಿಂದ ಬಂದ ಹೆಣ್ಣುಮಗಳಿಗೆ ಇಲ್ಲಿಯ ನೆಲಿ ನೆಟ್ಟು ಹೆಂಗ ತಿಳಿತೀದು ಅಂತ ನಿಮಗ ಅರಮನಸು ಇರಬಹುದು. ಆದರ ನಾನು ನಿಮ್ಮ ಮನಿಮಗಳು ಅಂತ ಅನಕೋಳ್ರಿ. ನನಗ ಆಶೀರ್ವಾದ ಮಾಡ್ರಿ'.

***

ಮಾಯಕ್ಕಳಿಗೆ ಈ ಬಾವಿಯ ಮೇಲೆ ಯಾಕಿಷ್ಟು ಮೋಹವೆಂದು ಹಲವರು ಒಂದೊಂದು ಸಲ ತಮ್ಮಷ್ಟಕ್ಕೆ ತಾವೆ ಅಂದುಕೊಳ್ಳುತ್ತಿದ್ದರು. ಆದರೆ 'ಈ ಬಾವಿಯಿಲ್ಲದಿದ್ದರೆ ಮಲ್ಲೂರು ಎನ್ನುವುದೂ ಇರುವುದಿಲ್ಲ' ಎಂಬುದು ಅವಳ ನಂಬಿಕೆ. ಊರಿನ ಎಲ್ಲ ಬಾವಿಗಳು ಬತ್ತಿದರೂ ದ್ಯಾಮವ್ವನ ಗುಡಿ ಸಮೀಪದ ಬಾವಿ ಮಾತ್ರ ಬತ್ತಲಾರದು ಎಂಬುದು ಮೊದಲಿನಿಂದಲೂ ಬಂದ ಪ್ರತೀತಿ. ಆದರೆ ಇನ್ನಷ್ಟು ದಿನಕ್ಕೆ ಇದು ಸಹ ಬತ್ತುವುದೇನೊ ಎನ್ನುವ ಹೆದರಿಕೆ ಒಮ್ಮೊಮ್ಮೆ ಸುಳಿಯುವುದು. ಇದರ ಜಲ ಸಹ ಈಗ ಪಾತಾಳ ಮುಟ್ಟಿತ್ತು. ಬಗ್ಗಿ ತುಂಬ ಸೂಕ್ಷ್ಮವಾಗಿ ನೋಡಿದಾಗ ಮಾತ್ರ ಅದರ ತಳದಲ್ಲಿ ಫಳಫಳ ಹೊಳೆಯುವ ನೀರು ಕಾಣಿಸುತ್ತದೆ. ಈ ಬಾವಿಗೆ ಬಹಳಷ್ಟು ಗುಪ್ತ ಸೆಲೆಗಳಿವೆ ಎಂದು ಹೇಳುತ್ತಿದ್ದರು. ಬಹುಶಃ ಅದಕ್ಕಾಗಿಯೆ ಇಷ್ಟು ದಿನವಾದರೂ ಬತ್ತಿಲ್ಲ. ಈ ಬಾವಿಗೆ ಯಾವ ದಿಕ್ಕಿನಿಂದ, ಯಾವ ಮೂಲೆಯಿಂದ ನೀರು ಹರಿದು ಬರುತ್ತದೆಯೆಂದು ಹೇಳುವುದು ಕಷ್ಟ. ಈ ನೀರು ಸೆಲೆಗಳಿಂದ ಎಂತಹ ಬರಗಾಲವನ್ನಾದರೂ ದಾಟಿ ಬಿಡಬಲ್ಲೆವು ಎನ್ನುವ ಕುವತ್ತು ಊರ ಮಂದಿಯಲ್ಲಿರುತ್ತಿತ್ತು. ಬಗ್ಗಿ ನೋಡುವುದಕ್ಕೆ ಹೆದರಿಕೆ ಬರುವಂತಿರುವ ಈ ಬಾವಿಯೊಳಗೆ ಇಳಿಯುವ ಸಾಹಸ ಮಾಡಿದವರು ಮಾತ್ರ ಬೆರಳೆಣಿಕೆಯಷ್ಟು ಮಂದಿ. ಮಾಯಕ್ಕ ಈ ಊರಿಗೆ ಬಂದಾಗಿನಿಂದ ಈ ಬಾವಿಗೆ ಬಂದು ಇದರ ನೀರು ಹೊತ್ತವಳು. ಅದೇ ತನ್ನನ್ನು ಬದುಕಿಸಿದೆ ಎಂದುಕೊಂಡಿದ್ದಾಳೆ. ಈ ಬಾವಿಕಟ್ಟೆಯೆ ತನ್ನನ್ನು ಬದುಕಿಸಿದೆ ಎಂದುಕೊಳ್ಳುತ್ತಾಳೆ.

ಈ ಕಟ್ಟೆ ಇಲ್ಲದಿದ್ದರೆ, ಈ ನಾಗಣ್ಣ ಇಲ್ಲದಿದ್ದರೆ ತಾನು ಜೀವಂತವೇ ಇರುತ್ತಿರಲಿಲ್ಲ! ಎರಡು ಸಲ ಆತ ತನ್ನನ್ನು ಉಳಿಸಿದ. ಅವನಿಗೆ ತಾನು ಎಷ್ಟು ಋಣಿಯಾಗಿದ್ದರೂ ಸಾಲದು. ಒಂದು ಸಲ ದೇವಪ್ಪನ ಕಾಟ ಜಾಸ್ತಿಯಾಗಿ ಜೀವವನ್ನು ಕಳೆದುಕೊಳ್ಳುವುದೆ ಮೇಲು ಎಂದು ಬಾವಿಗೆ ಬಂದಳು. ಯಾವುದ್ಯಾವುದೋ ಕಾರಣಕ್ಕೆ ಆತ ಸಂಶಯಪಡುತ್ತಿದ್ದ. ಇವನ ಕೈಯಲ್ಲಿ ತಾನಿನ್ನು ಬದುಕಲಾರೆ ಎನಿಸಿ ಒಂದು ನಟ್ಟನಡುರಾತ್ರಿ ಸೋತ ಹೆಜ್ಜೆ ಹಾಕುತ್ತ ಬಾವಿಗೆ ಬಂದಳು. ಊರೆಲ್ಲ ಮಲಗಿದಾಗ ರಾತ್ರಿಯ ಸದ್ದು ಕೇಳುವುದು ಭಯಾನಕವೆನಿಸಿತು. ಸಾಯುವುದೂ ಮತ್ತೂ ಭಯಾನಕವೆನಿಸಿತು. ಮಿಣಿಮಿಣಿ ಬೆಳಕಲ್ಲಿ ಬಾವಿಯ ನೀರು ಮೈಲುಗಟ್ಟಲೆ ದೂರ ಇರುವ ಹಾಗೆ ಕಂಡಿತು. ತಾನು ಅಲ್ಲಿಗೆ ಹೋಗಿ ಬೀಳುವುದೆ? ಅವಳಿಗೆ ಯಾಕೋ ಹೆದರಿಕೆ ಎನಿಸಿತು. ಸ್ವಲ್ಪ ಹೊತ್ತು ಅಲ್ಲಿಯೆ ಕುಳಿತಳು. ಬಾವಿಗೆ ಬೀಳಬೇಕೋ, ಬೇಡವೋ ಎನ್ನುವ ತಾಕಲಾಟ ಅವಳನ್ನು ಸುಡುತ್ತಿತ್ತು. ಸ್ವಲ್ಪ ಹೊತ್ತಿನ ಮೇಲೆ ಮನಸ್ಸು ಸ್ಥಿಮಿತಕ್ಕೆ ಬಂದಿತು. ಹೀಗೆ ಆತ್ಮಹತ್ಯೆ ಮಾಡಿಕೊಳ್ಳುವುದಕ್ಕಿಂತ ದೇವಪ್ಪನನ್ನು ಎದುರಿಸುವುದೆ ಮೇಲು ಎಂದುಕೊಂಡಳು! ಅಷ್ಟೊತ್ತಿಗೆ ನಾಗಪ್ಪ ಅಲ್ಲಿಗೆ ಬಂದ. ತೋಟಕ್ಕೆ ಹೋಗಿದ್ದನಂತೆ. ಒಬ್ಬೊಬ್ಬರು ಅವನನ್ನು ತೋಟದ ನಾಗಪ್ಪನೆಂತಲೂ ಇನ್ನಷ್ಟು ಮಂದಿ ಬಾವಿಯ ನಾಗಪ್ಪನೆಂತಲೂ ಕರೆಯುತ್ತಿದ್ದರು. ತೋಟದಿಂದ ಮರಳಿ ಮನೆಗೆ ಹೊರಟಿದ್ದನೆಂದು ಕಾಣುತ್ತದೆ. ಕಟ್ಟೆಯ ಮೇಲೆ ಒಂದು ಸ್ತ್ರೀ ಆಕೃತಿಯನ್ನು ನೋಡಿ ಅವನ ಎದೆ ಒಂದು ಕ್ಷಣ ಧಸಕ್ಕೆಂದಿತು.

ಕಟ್ಟೆಯ ಮೇಲೆ ಕುಳಿತಿರುವ ಆಕೃತಿ ಮಾಯಕ್ಕಳನ್ನು ಹೋಲುವುದು ಕಂಡು ಅವನ ಜಂಘಾಬಲವೇ ಉಡುಗಿತು. ಅಲ್ಲಿಯೆ ಕುಸಿದು ಅವಳ ಕಾಲ ಮೇಲೆ ಬಿದ್ದ. 'ಅಕ್ಕಾ, ಅಕ್ಕಾ, ಇದೇನು ಮಾಡಲಿಕ್ಕೆ ಹತ್ತೀದಿ? ಏಳು? ನಡೀ ಮನಿಗೆ.' ಅವಳು ಏನೂ ಹೇಳದೆ ಅಳುತ್ತಲೆ ಇದ್ದಳು. ಒತ್ತಾಯದಿಂದ ಅವಳನ್ನು ಮುನ್ನಡೆಸಿಕೊಂಡು ಹೊಟೇಲ್ ದಾರಿಯಲ್ಲಿ ನಡೆದ. ದೇವಪ್ಪ ಈ ಕಡೆ ಅಷ್ಟೊತ್ತಿಗೆ ಬ್ಯಾಟರಿ ಹಿಡಿದು ನಡೆದು ಬರುತ್ತಿದ್ದ. ಅವನೊಂದಿಗೆ ದುಂಡಪ್ಪಕಾಕಾ ಸಹಿತ ಇದ್ದ. ತನ್ನ ಹೆಂಡತಿಯನ್ನು ಹುಡುಕುವ ಧೈರ್ಯ ಸಾಲದೆ ದುಂಡಪ್ಪಕಾಕಾನನ್ನು ಕರೆದುಕೊಂಡು ಹೊರಟಿರಬೇಕು. ಮಾಯಕ್ಕ ದುಂಡಪ್ಪಕಾಕಾನನ್ನು ಕಂಡ ಕೂಡಲೇ ತಬ್ಬಿಕೊಂಡು ಜೋರಾಗಿ ಅಳತೊಡಗಿದಳು.

'ಮಾಯಕ್ಕ, ನನ್ನ ಮಗಳೆ, ನಡೀ ಒಳಗ ಹೋಗೋಣು. ನೀ ಇಷ್ಟು ಜೋರಾಗಿ ಅತ್ತರ ಊರಾನ ಮಂದಿ ಏನು ಅನಕ್ಕೊಂಡಾರು.' ಅವರು ಒಳಗೆ ಹೋದರು. ನಾಗಣ್ಣ ತನ್ನ ಮನೆಗೆ ನಡೆದ. ಆ ಘಟನೆಯನ್ನು ನಾಗಣ್ಣ ಯಾವತ್ತೂ ಯಾರ ಬಳಿಯೂ ಹೇಳಲಿಲ್ಲ. ಇನ್ನೊಂದು ಅಂತಹುದೇ ಘಟನೆಯೆಂದರೆ ತನ್ನ ರತ್ನಖಚಿತ ಕೊರಳ ಸರಕ್ಕೆ ಸಂಚಕಾರ ಬಂದ ಗಳಿಗೆ. ಅದೂ ಜೀವ ಹೋಗುವಂತಹುದೆ ಆಗಿತ್ತಲ್ಲ? ಆಗಲೂ ನಾಗಣ್ಣನೆ ನೆರವಿಗೆ ಬಂದ!

ಬಾಗವಾನ ನಾಗ್ಯಾ ದುಂಡಪ್ಪಕಾಕಾನ ತೋಟದಲ್ಲಿ ಕೆಲಸ ಮಾಡಿಕೊಂಡಿರುವವನು. ತೋಟದ ಜೊತೆಗೆ ಊರಲ್ಲಿಯ ಕೆಲವು ಮನೆಗಳಲ್ಲಿ ಕೆಲಸ. ಮನೆಯಲ್ಲಿ ತಾಯಿ ಒಬ್ಬಳೆ. ಹಗಲುರಾತ್ರಿ ತೋಟದಲ್ಲಿದ್ದುಕೊಂಡು ತೋಟದ ದೇಖರೇಖಿ ನೋಡಿಕೊಂಡಿರುವವನು. ಹೊತ್ತುಹೊತ್ತಿಗೆ ಅವುಗಳ ಪಾಲನೆಪೋಷಣೆ ಮಾಡುತ್ತ ಮರದೊಂದಿಗೆ ಮರವಾದವನು. ಗಿಡದೊಂದಿಗೆ ಗಿಡವಾದವನು. ಹೂವಿನೊಂದಿಗೆ ಹೂವು, ಮುಳ್ಳಿನೊಂದಿಗೆ ಮುಳ್ಳಾದವನು. ಹೊಲಗದ್ದೆ ತೋಟಪಟ್ಟಿಯ ಸಕಲ ಪಡಿಪದಾರ್ಥಗಳು ಅವನಿಗೆ ಗೊತ್ತಿರುವಂಥವೆ ಆಗಿದ್ದವು. ತೋಟದ ಜೊತೆಗೆ ಊರಿನ ಕೆರೆಬಾವಿಗಳ ಆಳ ಅಗಲಗಳನ್ನೂ ಆತ ಬಲ್ಲ. ಹೀಗಾಗಿಯೆ ಅನೇಕ ಸಲ ನಾಗಣ್ಣ ಇಲ್ಲದಿದ್ದರೆ ಮಲ್ಲೂರಿನ ಹೃದಯಬಡಿತ ನಿಲ್ಲುತ್ತಿತ್ತು. ಅನೇಕ ಸಲ ಪಾತಾಳಗರಡಿಯೊಂದಿಗೆ ಇಳಿದು ಬಾವಿಯೊಳಗೆ ಬಿದ್ದಿದ್ದ ಬೆಲೆಬಾಳುವ ಸಾಮಾನುಗಳನ್ನು ಆತ ತೆಗೆದುಕೊಟ್ಟಿದ್ದ.

'ದ್ಯಾಮವ್ವನಗುಡಿ ಸಮೀಪದ ದೊಡ್ಡ ಬಾಂವಿಯನ್ನು ಹಗಲು ಅಗದೀ ನಿಚ್ಚಳಾದ ಮ್ಯಾಲ ನೋಡಬೇಕೆ ಹೊರತು ಬಾಳ ನಸುಕಿನ್ಯಾಗ, ಇಲ್ಲಾ ಸಂಜಿ ಆದ ಮ್ಯಾಲ ನೋಡಬಾರದು' ಅನ್ನೋ ಪ್ರತೀತಿಯಿತ್ತು. ಅಂತಹುದರಲ್ಲಿ ನಾಗಣ್ಣ ಹಗಲು ರಾತ್ರಿಯೆನ್ನದೆ ಬಾವಿಯಿಂದ ನೀರು ಸೇದುವುದನ್ನು ನೋಡಿದಾಗ ಅವನಲ್ಲಿ ಮನೋದಾರ್ಢ್ಯ ಎಷ್ಟೆಲ್ಲ ಇದೆಯೆಂದು ಮಾಯಕ್ಕ ವಿಸ್ಮಯಪಡುವಳು. ತಮ್ಮ ಸುತ್ತಮುತ್ತ ಇಂತಹ ಒಂದೆರಡು ವ್ಯಕ್ತಿಗಳು ಇದ್ದರೆ ಸಾಕು, ತಮಗೂ ಬದುಕಿ ಬಾಳಲು ಹುಮ್ಮಸ್ಸು ಬರುವುದೆಂದು ಅನಿಸುವುದು. ತನಗೇನು ಲಾಭವೆಂದು ನಾಗಣ್ಣ ಎಂದೂ ಯೋಚಿಸಲಿಲ್ಲ. ಆ ದಿನ ಬಾವಿಗೆ ನೀರಿಗೆ ಬಂದಾಗ ಮಾಯಕ್ಕನ ಕೊರಳಲ್ಲಿಯ ಅವಲಕ್ಕಿ ಸರ ಹೊಳೆಯುತ್ತಿತ್ತು. ಅದರ ಮಾಟ ಕಂಡು ಎಲ್ಲರೂ ಹೊಗಳುವವರೆ.

'ಅಯ್ಯ ಮಾಯಕ್ಕ, ಸರಾ ಎಷ್ಟ ಚೆಂದ ಐತೆಲ್ಲ, ನಿನ್ನ ಕೊಳ್ಳಿಗಂತೂ ಎಷ್ಟ ಚೆಂದ ಕಾಣತೈತಿ. ತಗೊಂಬಾ ಇಲ್ಲಿ, ಸ್ವಲ್ಪ ನೋಡೋಣು.' ಮೇಲಿನಮನಿ ಗೌರವ್ವನ ಮಾತಿಗೆ ಸಾಂವಕ್ಕ ತನ್ನ ದನಿಯೂ ಕೂಡಿಸಿದಳು: 'ಅಲ್ಲ ಗೌರಕ್ಕ, ಮಾಯಕ್ಕನ ಕೊಳ್ಳು ಚೆಂದ ಕಾಣೋದು ಸೈಯೇ ಸೈ. ಆದರ ನನಗ ಏನ್ ಅನಿಸ್ತದಂದ್ರ ಈ ಸರ ಹಾಕ್ಕೊಂಡಾಗ ಅವಳ ಎದಿ ಮತ್ತಷ್ಟು ಎದ್ದ ಕಾಣತೈತಿ ನೋಡು. ಅಲ್ಲ?'

ಸಾಂವಕ್ಕನ ಮಾತಿಗೆ ಎಲ್ಲರೂ ಗೊಳ್ಳನೆ ನಕ್ಕರು. ವಾರೆನೋಟದಿಂದ ಅವಳನ್ನು ನೋಡಿದರು. ತನ್ನ ನಡದ ಮೇಲೆ ಸರಸರ ನೀರು ಒಯ್ಯುವ ಮಾಯಕ್ಕ ಮತ್ತಷ್ಟು ನಾಚಿಕೊಂಡು ನೀರಾದಳು. ಅವಳ ಕಣ್ಣುಗಳು ಮತ್ತಷ್ಟು ಕಾಂತಿಯುತವಾಗಿ

